ಆ) ಮೂಡಿಗೆರೆ ತಾಲ್ಲೂಕಿನಲ್ಲಿ ಬಾಕಿ ಉಳಿದಿರುವ ಹ್ಯಾಮ್ಲೆಟ್ ಹರಿಜನ ಬಸ್ತಿ ಹರಿಜನ ಕಾಲೋನಿಗಳನ್ನು ಮಂಡಳಿಗೆ ಲಭ್ಯವಿರುವ ಆರ್ಥಿಕ ಸಂಪನ್ಮೂಲವನ್ನು ಗುಣವಾಗಿ 1994ನೇ ವರ್ಷದೊಳಗಾಗಿ ಹಂತ ಹಂತವಾಗಿ ವಿದ್ಯುದ್ದೀಕರಿಸಲಾಗುವುದು.

ಕೊರತೆ ಇರುವ ಪ್ರಾಥಮಿಕ ಶಿಕ್ಷಕರುಗಳ ಸಂಖ್ಯೆ

2185 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಈಗ ಇರುವ ನಿಯಮದ ಪ್ರಕಾರ ಅವಶ್ಯವಿರುವ ಶಿಕ್ಷಕರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮತ್ತು ತಾಲ್ಲುಕುವಾರು ಮಾಹಿತಿಗಳನ್ನೊದಗಿಸುವುದು)*

ಆ) *1-4-1990 ರಿಂದ 31-7-91ರ ವರೆವಿಗೆ ನೇಮಕ ಮಾಡಿಕೊಳ್ಳಲಾದ ಪ್ರಾಥಮಿಕ ಶಿಕ್ಷಕರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಗಳನ್ನು ಒದಗಿಸುವುದು)*

ಇ) *ಕೊರತೆಯಿರುವ ಪ್ರಾಥಮಿಕ ಶಿಕ್ಷಕರ ಸಂಖ್ಯೆ ಎಷ್ಟು?*

ಈ) *ಇದನ್ನು ಭರ್ತಿಮಾಡಲು ಸರ್ಕಾರದ ಮುಂದಿರುವ ಕ್ರಮಗಳೇನು?*

ಶ್ರೀ ಎಂ. ವೀರಪ್ಪಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರ ಸಚಿವರು):

ಅ) *1,27,562 ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಪಡೆದು ಒದಗಿಸಲಾಗುವುದು.*

ಆ) *7,947 ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಗಳನ್ನು ಪಡೆದು ಒದಗಿಸಲಾಗುವುದು.*

ಇ) *18,163*

ಈ) *ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ.*

ಉಡುಪಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ಕಟ್ಟಡ ಕುರಿತು

2448 - ಶ್ರೀ ವಿ. ಬಸವರಾಜು (ಬ್ರಹ್ಮಾವರ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉಡುಪಿ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿದೆಯೇ? ಹಾಗಿದ್ದಲ್ಲಿ ಕಟ್ಟಡಕ್ಕೆ ನೀಡುತ್ತಿರುವ ಬಾಡಿಗೆ ಹಣ ಎಷ್ಟು?*

ಆ) *ಈ ಕಛೇರಿಗೆ ಸ್ವಂತ ಕಟ್ಟಡವನ್ನು ಹೊಂದಲು ಅನುಕೂಲವಾಗುವಂತೆ ಸರ್ಕಾರಿ ನಿವೇಶನ · ನೀಡಲಾಗಿದೆಯೇ? ಕಟ್ಟಡ ಕಾಮಗಾರಿಯ ವೆಚ್ಚಕ್ಕಾಗಿ ಆರ್ಥಿಕ ಇಲಾಖೆಯ ಮಂಜೂರಾತಿ ದೊರಕಿದೆಯೇ? (ಯಾವ ಸ್ಥಳದಲ್ಲಿ ಯಾವಾಗ ಸಂಪೂರ್ಣ ವಿವರ ನೀಡುವುದು) ಹಾಗಿದ್ದಲ್ಲಿ ಕಛೇರಿಯ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಿ ಪೂರ್ಣಗೊಳಿಸಲಾಗುವುದು?*

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು):

ಅ) ಹೌದು ಮಾಹೆಯಾನ ರೂ. 2,850-00 ಗಳು

ಆ) ಸರ್ಕಾರವು ಈ ಕಛೇರಿಯ ಸ್ವಂತ ಕಟ್ಟಡವನ್ನು ಹೊಂದಲು ಉಡುಪಿ ತಾಲ್ಲೂಕು ಪುತ್ತೂರು ಗ್ರಾಮಕ್ಕೆ ಸೇರಿದ ಸರ್ವೆ ನಂಬರ್ 228 : 1ಎ 1ಎರಲ್ಲಿ 1.35 ಎಕರೆ ಪ್ರದೇಶವನ್ನು ಮಂಜೂರಾತಿ ನೀಡಿದೆ. ಆರ್ಥಿಕ ಇಲಾಖೆಯ ಮಂಜೂರಾತಿ ಇದುವರೆವಿಗೂ ದೊರೆತಿರುವುದಿಲ್ಲ.